# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನಸಾಗರ ಆವರಣ, ಬಳ್ಳಾರಿ-583105

**VIJAYANAGARA SRI KRISHNADEVARAYA UNIVERSITY**

"Jnana Sagar" Campus, Ballari-583 105

**ಕಾಲೇಜು ಅಭಿವೃದ್ಧಿ ಮಂಡಳಿ** **ಫೊ.ನಂ.08392-242093**

**Web:www.vskub.ac.in** **E-mail. directorcdcvskub@gmail.com**


ಸಂಖ್ಯೆ:ವಿ.ಶ್ರೀ.ಕೃ.ವಿ.ವಿ.ಬ/ಕಾ.ಅ.ಮಂ/ಸಂಯೋಜನೆ/ಅಧಿಸೂಚನೆ/2021-22/243 ದಿನಾಂಕ: 16.06.2021

## ಅಧಿಸೂಚನೆ ಪ್ರಕಟಣೆ

**ವಿಷಯ:** 2021-2022ನೇ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಮುಖಾಂತರ ಸಂಯೋಜನಾ ಅರ್ಜಿ ಆಹ್ವಾನಿಸುವ ಕುರಿತು.

**ಉಲ್ಲೇಖ:** 01. ಸರ್ಕಾರದ ಆದೇಶ ಸಂಖ್ಯೆ:ಇಡಿ 34 ಇಜಿಓವಿ 2020 (ಭಾಗ), ದಿನಾಂಕ:22.06.2020.
02. ಸರ್ಕಾರದ ಆದೇಶ ಸಂಖ್ಯೆ:ಇಡಿ 34 ಇಜಿಓವಿ 2020 (ಭಾಗ-2), ದಿನಾಂಕ:10.06.2021.
03. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15.06.20.21

*****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಮಹಾವಿದ್ಯಾಲಯಗಳು/ಆಡಳಿತ ಮಂಡಳಿಗಳಿಂದ 2021-22ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನೆಯನ್ನು ನವೀಕರಿಸಲು, ಹೊಸ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು, ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ/ಹೊಸ ಕಾಲೇಜುಗಳನ್ನು ಪ್ರಾರಂಭಿಸಲು, ಶಾಶ್ವತ ಸಂಯೋಜನೆಯನ್ನು ಪಡೆಯಲು, ಹೆಸರು ಬದಲಾವಣೆ/ಕಾಲೇಜುಗಳನ್ನು ಸ್ಥಳಾಂತರಿಸಲು/ಆಡಳಿತ ಬದಲಾವಣೆ ಮುಂತಾದವುಗಳಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಯೋಜನ ಶುಲ್ಕದ ಮಾಹಿತಿಯನ್ನು ಮತ್ತು ಸಂಯೋಜನೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ವಿಶ್ವವಿದ್ಯಾಲಯದ ಜಾಲತಾಣ (website: www.vskub.ac.in) ದಲ್ಲಿ ಹಾಗೂ ಆನ್‌ಲೈನ್ ಅರ್ಜಿ ಹಾಗೂ ಇತರೆ ಎಲ್ಲಾ ಮಾಹಿತಿಯನ್ನು ಜಾಲತಾಣ website): https://www.onlineaffiliation.karnataka.gov.in/affiliation2122/ ರಲ್ಲಿ ನೋಡಬಹುದು. ಸಂಯೋಜನಾ ಶುಲ್ಕವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ online payment gateway ಮೂಲಕ ಪಾವತಿಸಬೇಕು.

ಮುಂದುವರೆದು, ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿ ಪಡೆದು ಶುಲ್ಕ ಭರಿಸಿದ್ದರ ಬಗ್ಗೆ ರಸೀದಿ ಮತ್ತು ಸಂಪೂರ್ಣ ದಾಖಲೆಗಳೆಲ್ಲವುಗಳನ್ನು ಬೈಂಡಿಂಗ್/ಸ್ಪೈರಲ್ ಬೈಂಡಿಂಗ್ ಮಾಡಿಸಿ ಒಂದು ಪ್ರತಿಯನ್ನು **ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ,** ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಆವರಣ, ಬಳ್ಳಾರಿ-583105 ಇವರಿಗೆ ಈ ಕೆಳಗೆ ಸೂಚಿಸಿರುವ ದಿನಾಂಕದೊಳಗೆ ಸಲ್ಲಿಸಲು ತಿಳಿಸಲಾಗಿದೆ.

| | | |
|---|---|---|
| 1. | ದಂಡ ರಹಿತ ಕೊನೆಯ ದಿನಾಂಕ | 16.06.2021 ರಿಂದ 30.06.2021 |
| 2. | ರೂ.20,000/-ದಂಡ ಶುಲ್ಕದೊಡನೆ | 01.07.2021 ರಿಂದ 08.07.2021 |
| 3. | ರೂ.40,000/- ದಂಡ ಶುಲ್ಕದೊಡನೆ | 09.07.2021 ರಿಂದ 16.07.2021 |

ದಿನಾಂಕ: **16.07.2021ರ** ನಂತರ ಬಂದ ಸಂಯೋಜನಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಯಾವುದೇ ಕಾರಣಕ್ಕೂ ಸಂಯೋಜನಾ ಅರ್ಜಿ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ.

ಸಹಿ/-
ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ